ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	75
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ ಹರೀಶ್ ಕುಮಾರ್
ಉತ್ತರಿಸುವ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	**21–09–2020**

	ಪ್ರಶ್ನೆ	ಉತ್ತರ
(ಅ)	ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪ ಶೈಕ್ಷಣಿಕ ಕ್ಯಾಲೆಂಡನ್ನು ಜಾರಿಗೆ ತರುವ ಆಲೋಚನೆ ಸರ್ಕಾರದ ಮುಂದಿದೆಯೇ:	ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ದಾಖಲಾತಿ, ಪರೀಕ್ಷಾ ವೇಳಾ ಪಟ್ಟಿ ಮತ್ತು ಫಲಿತಾಂಶಗಳ ಪ್ರಕಟಣೆಯಲ್ಲಿ ಏಕರೂಪತೆಯನ್ನು ಜಾರಿಗೆ ತರುವುದಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ. ಇಡಿ 292 ಯುಎನ್‌ಇ 2016, ದಿನಾಂಕ: 28–07–2016ರಲ್ಲಿ ವೇಳಾಪಟ್ಟಿಗಳನ್ನು ನಿಗಧಿಪಡಿಸಿ ಆದೇಶಿಸಿದೆ **(ಅನುಬಂಧ)**.
(ಆ)	ಏಕರೂಪದ ಶೈಕ್ಷಣಿಕ ಕ್ಯಾಲೆಂಡರ್ ಜಾರಿಗೆ ಬರುವುದು ಯಾವಾಗ:	ಕೋವಿಡ್–19 ಸಾಂಕ್ರಾಮಿಕ ಖಾಯಿಲೆಯು ಹರಡಿದ ಹಿನ್ನೆಲೆಯಲ್ಲಿ ಕಳೆದ ಹಾಗೂ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಸದರಿ ವೇಳಾಪಟ್ಟಿಯನ್ನು ಅನುಸರಿಸಲು ಸಾಧ್ಯವಾಗಿರುವುದಿಲ್ಲ. ಸಾಂಕ್ರಾಮಿಕ ಖಾಯಿಲೆಯು ಇಳಿಮುಖವಾದ ನಂತರ ಏಕರೂಪ ಶೈಕ್ಷಣಿಕ ಕ್ಯಾಲೆಂಡರ್ ಮತ್ತೆ ಜಾರಿಗೆ ಬರುತ್ತದೆ.
(ಇ)	ಇದರಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲ / ಅನಾನುಕೂಲವೇನು ?	ಏಕರೂಪ ವೇಳಾಪಟ್ಟಿಯ ಜಾರಿಯಿಂದಾಗಿ, ವಿದ್ಯಾರ್ಥಿಗಳು ಪ್ರವೇಶಾತಿಗೆ ಯೋಜಿಸಲು, ಪರೀಕ್ಷೆಗೆ ಸಿದ್ದತೆ ನಡೆಸಲು, ನಿಗಧಿತ ಅವಧಿಯಲ್ಲಿ ಫಲಿತಾಂಶ ಪಡೆಯಲು ಹಾಗೂ ಅಂಕಪಟ್ಟಿ & ಪ್ರಮಾಣ ಪತ್ರಗಳನ್ನು ಪಡೆಯಲು ಅನುಕೂಲವಾಗುತ್ತದೆ.

ಸಂಖ್ಯೆ: ಇಡಿ 268 ಯುಎನ್‌ಇ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

(ಅನುಬಂಧ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸುವ ಕುರಿತು.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ: ಇಡಿ 534 ಯುಆರ್‌ಸಿ 2013, ದಿನಾಂಕ 06-01-2014.

ಪ್ರಸ್ತಾವನೆ:-

ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಏಕ ರೂಪತೆ ಇಲ್ಲದಿರುವುದರಿಂದ, ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ವ್ಯಾಸಂಗ ಮುಂದುವರೆಸಲು/ ಉದ್ಯೋಗಕ್ಕೆ ಅರ್ಜಿ ಸಲ್ಲಿಸುವಲ್ಲಿ ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಸರ್ಕಾರ ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ 2014-15ನೇ ಶೈಕ್ಷಣಿಕ ವರ್ಷದಿಂದ ಏಕರೂಪ ವೇಳಾಪಟ್ಟಿಯನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ಹಿನ್ನಡೆಯಾಗದಂತೆ ಕ್ರಮವಹಿಸಲು ಆದೇಶಿಸಲಾಗಿತ್ತು. 2016-17ನೇ ಶೈಕ್ಷಣಿಕ ಸಾಲಿಗೂ ಸಹ ಇದೇ ತರಹ ಏಕರೂಪ ವೇಳಾಪಟ್ಟಿಯನ್ನು ಅಳವಡಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ತೀರ್ಮಾನಿಸಲಾಗಿದೆ.

ಪ್ರಸ್ತುತ, ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿರುತ್ತದೆ. ಅದರಂತೆ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 292 ಯುಎನ್‌ಇ 2016, ಬೆಂಗಳೂರು, ದಿನಾಂಕ: 28ನೇ ಜುಲೈ 2016

ರಾಜ್ಯದಲ್ಲಿರುವ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಈ ಕೆಳಗೆ ಸಿದ್ಧಪಡಿಸಿರುವ ಏಕರೂಪ ವೇಳಾಪಟ್ಟಿಯನ್ನು 2016-17ನೇ ಶೈಕ್ಷಣಿಕ ವರ್ಷ ಹಾಗೂ ತದನಂತರದ ಶೈಕ್ಷಣಿಕ ವರ್ಷಗಳಲ್ಲಿಯೂ ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ಹಿನ್ನಡೆಯಾಗದಂತೆ ಕ್ರಮವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಮುಂದುವರೆದು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಪ್ರತಿ ವರ್ಷವು ಕಡ್ಡಾಯವಾಗಿ ಸ್ನಾತಕ ಪದವಿಗಳ ಫಲಿತಾಂಶವನ್ನು ಮೇ 31ರ ಒಳಗಾಗಿ ಹಾಗೂ ಸ್ನಾತಕೋತ್ತರ ಪದವಿಗಳ ಫಲಿತಾಂಶವನ್ನು ಜೂನ್ 30ರ ಒಳಗಾಗಿ ಪ್ರಕಟಿಸಬೇಕು. ಈ ಸೂಚನೆಯನ್ನು ಪಾಲಿಸದೇ ಇದ್ದಲ್ಲಿ ಆಯಾ ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು.

Common Calendar of Events for Under Graduate courses in the Universities

Sl No.	Academic Activity	Range of dates
1.	Re-opening of colleges and Commencement of I Semester Admission	1st June
2.	Commencement of I, III, & V Semester Classes	Between 15th & 30th June
3.	Last date for admission to 1st semester without penal fee	16th July
4.	Last date for admission to 1st Semester with penal fee	30th July
5.	End of I, III, & V Semester Classes	Between 8th & 22nd Oct.
6.	Commencement of Vacation for Teachers	23rd Oct.
7.	Commencement of I, III, & V Sem. Theory Examination	Between 15th Oct. & 2nd Nov.
8.	Commencement of Valuation	Between 25th Oct. & 12th Nov.
9.	Commencement of II, IV & VI Semester Classes	Between 21st Nov. & 1st Dec.
10.	End of the II, IV & VI Semester classes	Between 20th & 31st March
11.	Commencement of Vacation for teachers	1st April
12.	Commencement II, IV & VI Semester Examinations	Between 27th March & 10th April
13.	Commencement of Valuation	Between 10th & 17th April
14.	Announcement of Results	Between 15th & 31st May
15.	Re-opening of Colleges for the next academic year	1st June

Common Calendar of Events for Post Graduate courses in the Universities

Sl No.	Academic Activity	Range of dates
1.	Re-opening of PG Depts./colleges	11th July
2.	Commencement of III Semester Classes.	Between 18th & 30th July
3.	Commencement of I Semester Classes	Between 1st & 10th Aug
4.	End of III Semester Classes	Between 19th &30th Nov
5.	End of I Semester Clases	Between 26th Nov & 3rd Dec
6.	Vacation for Teachers	4th to 30th Dec
7	Commencement of III Semester Examination	Between 28th Nov - 7th Dec
8.	Commencement of I Semester Examination	Between 5th &10th Dec
9.	Commencement of Valuation of both I & III Semesters	Between 8th &15th Dec
10.	Re-opening of Classes for II & IV Semesters	Between 2nd & 9th Jan
11.	End of II & IV Semesters	Between 29th April & 6th May
12.	Commencement of Theory Examinations	8th May
13.	Commencement of Vacation for Teachers	10th May
14.	Commencement of Valuation	22nd May
15.	Announcement of Results	30th June
16.	Re-opening of PG Depts/Colleges	3rd July
17.	Commencement of III Sem. Classes during the next Academic Year	10th July

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್. ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಇವರಿಗೆ:-

1. ಆಯುಕ್ತರು/ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿ/ಕುಲಸಚಿವರುಗಳಿಗೆ

ಪ್ರತಿ:-

ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಅರಮನೆ ರಸ್ತೆ, ಬೆಂಗಳೂರು.

2. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ
4. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.

***